4. ಸರ್ಕಾರಿ ಪ್ರೌಢಶಾಲೆ ಹುಲಿಕುಂಟೆ
5. ಸರ್ಕಾರಿ ಪ್ರೌಢಶಾಲೆ ಅಣಬೆ
6. ಸರ್ಕಾರಿ ಪ್ರೌಢಶಾಲೆ ಅರಳುಮಲ್ಲಿಗೆ
7. ಸರ್ಕಾರಿ ಪ್ರೌಢಶಾಲೆ ಚನ್ನವೀರನಹಳ್ಳಿ
8. ಸರ್ಕಾರಿ ಪ್ರೌಢಶಾಲೆ ದೊಡ್ಡಬೆಳವಂಗಲ
9. ಸರ್ಕಾರಿ ಪ.ಪೂ.ಕಾಲೇಜುದೊಡ್ಡಬಳ್ಳಾಪುರ
10. ಸರ್ಕಾರಿ ಪ.ಪೂ.ಕಾಲೇಜು ಕನಸವಾಡಿ
11. ಸರ್ಕಾರಿ ಪ್ರೌಢಶಾಲೆ (ತೆಲುಗು)

ತುರುವೇಕೆರೆ ನಗರದಲ್ಲಿರುವ ಪ್ರಥಮ ದರ್ಜೆ ಕಾಲೇಜಿಗೆ ಶಾಲಾ ಕೊಠಡಿಗಳ ಕೊರತೆ ಬಗ್ಗೆ

73 (86) - ಶ್ರೀ ಲಕ್ಷ್ಮೀನಾರಾಯಣ ಎಂ ಡಿ (ಅಣ್ಣಯ್ಯ) (ತುರುವಕೆರೆ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ನಗರದಲ್ಲಿರುವ ಪ್ರಥಮ ದರ್ಜೆ ಕಾಲೇಜಿಗೆ ಶಾಲಾ ಕೊಠಡಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈಗಾಗಲೇ ಅನೇಕ ಪ್ರಸ್ತಾವನೆ ಕಳಿಸಿದ್ದರೂ ಮಾನ್ಯತೆ ಮಾಡದಿರಲು ಕಾರಣವೇನು;

ಇ) ಈ ವರ್ಷ ಕನಿಷ್ಟ 4 ಕೊಠಡಿಗಳನ್ನು ಸರ್ಕಾರ ಮಂಜೂರು ಮಾಡುವುದೇ?

ಡಾ।। ಜಿ ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು) :

ಅ) ಹೌದು

ಆ) ಸದರಿ ಕಾಲೇಜಿನ ಕಟ್ಟಡದ ಕಾಮಗಾರಿಯ ಪ್ರಗತಿಯಲ್ಲಿದ್ದು ಹುಡ್ಕೋ ನೆರವಿನ ಯೋಜನೆಯೊಂದನ್ನು ರೂಪಿಸಿದ್ದು, ಹೂಡ್ಕೊ ಸಂಸ್ಥೆಯಿಂದ ನೆರವು ದೊರೆತ ನಂತರ ಕಟ್ಟಡದ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗುವುದು.

ಇ) ಹುಡ್ಕೊ ಸಂಸ್ಥೆಯಿಂದ ಆರ್ಥಿಕ ನೆರವು ದೊರೆತ ನಂತರ ಕ್ರಮ ಕೈಗೊಳ್ಳಲಾಗುವುದು.

ತುರುವೇಕೆರೆ ತಾಲ್ಲೂಕ ಸಂಪಿಗೆ, ಮಾಚನೇಹಳ್ಳಿ ತಂಡಗ ಇವುಗಳನ್ನು ಪಿ.ಹೆಚ್.ಯರಿಂದ ಪಿ.ಹೆಚ್.ಸಿ ಮಾಡುವುದು

74 (87) - ಶ್ರೀ ಲಕ್ಷ್ಮೀನಾರಾಯಣ ಎಂ.ಡಿ (ಅಣ್ಣಯ್ಯ) (ತುರುವೇಕೆರೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕು ಸಂಚಿಗೆ, ಮಾಚೇನಹಳ್ಳಿ, ತುಡಗ ಇವುಗಳು ಪ್ರಾಥಮಿಕ ಆರೋಗ್ಯ ಘಟಕ ಆಗಿದ್ದು ಸರಿಯಾದ ಸೌಕರ್ಯ ಜನರಿಗೆ ದೊರಕದಿರುವುದು ಸರ್ಕಾರಕ್ಕೆ ಗೊತ್ತಿದೆಯೇ;

ಆ) ಹಾಗಿದ್ದಲ್ಲಿ ಇವುಗಳನ್ನು (3) ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನಾಗಿ ಯಾವಾಗ ಮಾಡಲಾಗುವುದು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ತುರುವೇಕೆರೆ ತಾಲ್ಲೂಕಿಗೆ ಆಶ್ರಯ ಮನೆ ಹಂಚಿಕೆ

75 (88) - ಶ್ರೀ ಲಕ್ಷ್ಮೀನಾರಾಯಣ ಎಂ ಡಿ (ತುರುವೇಕೆರೆ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕಿನಲ್ಲಿ ಆಶ್ರಯ ಮನೆಗಳಿಗೆ ಹೆಚ್ಚಿನ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ವರ್ಷಕ್ಕೆ 1000 ಕ್ಕೂ ಹೆಚ್ಚು ಮನೆಗಳನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು) :

ಅ) ಹೌದು.

ಆ)

ವರ್ಷ	ಮಂಜೂರಾದ ಮನೆಗಳು		
	ಗ್ರಾಮೀಣ ಆಶ್ರಯ	ನವಗ್ರಾಮ ಆಶ್ರಯ	ನಗರ ಆಶ್ರಯ
2000-01	480	150	30
2001-02	330	240	30

ತುರುವೇಕೆರೆ ತಾಲ್ಲೂಕ ಹೆಗ್ಗೆರೆ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ

76 (89) - ಶ್ರೀ ಲಕ್ಷ್ಮೀನಾರಾಯಣ ಎಂ ಡಿ (ಅಣ್ಣಯ್ಯ) : ಮಾನ್ಯ ಗ್ರಾಮೀಣ ನೀರು ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕು ಹೆಗ್ಗೆರೆ ಗ್ರಾಮದಲ್ಲಿ ಕೊಳವೆ ನೀರಿನ ಕಾಮಗಾರಿ ಯಾವಾಗ ಪ್ರಾರಂಭವಾಯಿತು;